# ತುಮಕೂರು ವಿಶ್ವವಿದ್ಯಾನಿಲಯ

ಬಿ.ಹೆಚ್.ರಸ್ತೆ, ತುಮಕೂರು-572103. ಫೋ. 0816-2255597, ಫ್ಯಾಕ್ಸ್: 0816-2270719


## ಆದೇಶ

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಘಟಕ ಮತ್ತು ಸಂಯೋಜಿತ ಕಾಲೇಜುಗಳು ಪ್ರತೀ ವರ್ಷ ಸಲ್ಲಿಸುವ ಕ್ರೀಡಾ ಅಭಿವೃದ್ಧಿ ಶುಲ್ಕದಲ್ಲಿ ಶೇ25% ರಷ್ಟು ಹಣವನ್ನು ಸಂಬಂಧ ಪಟ್ಟ ಕಾಲೇಜುಗಳಲ್ಲಿ ಉಳಿಸಿಕೊಳ್ಳುವ ಕುರಿತು.

ಉಲ್ಲೇಖ: 1. ದಿನಾಂಕ: 16.10.2015ರಂದು ನಡೆದ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡಾ ಕಾರ್ಯದರ್ಶಿಗಳ ಸಭೆಯ ನಡಾವಳಿಗಳು.
2. ದಿನಾಂಕ 02.03.2017ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.08.2017.

ವಿ.ವಿ.ಆದೇಶ.ಸಂಖ್ಯೆ:ಕ್ರೀ.ವಿ/ಕ್ರೀ.ಅ.ಶುಲ್ಕ/2017-18/ 2177 ದಿನಾಂಕ:12.09.2017

ತುಮಕೂರು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಕ್ರೀಡೆಗಳನ್ನು ಉತ್ತೇಜಿಸುವ ಸಲುವಾಗಿ ದಿನಾಂಕ:02.03.2017ರಲ್ಲಿ ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಅಡಿಯಲ್ಲಿ ಬರುವ ಘಟಕ ಮತ್ತು ಸಂಯೋಜಿತ ಕಾಲೇಜುಗಳು ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ನಿಯಮಾನುಸಾರ ಪಡೆಯುವ ಕ್ರೀಡಾ ಅಭಿವೃದ್ಧಿ ಶುಲ್ಕದಲ್ಲಿ **ಶೇ25%** ರಷ್ಟು ಹಣವನ್ನು ಮುರುಗಡೆ ಮಾಡಿಕೊಂಡು ಉಳಿದ **ಶೇ75%** ರಷ್ಟು ಹಣವನ್ನು ವಿಶ್ವವಿದ್ಯಾನಿಲಯದ ಕ್ರೀಡಾ ನಿಧಿಗೆ ಜಮೆ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಆದೇಶಿಸಲಾಗಿದೆ.

1. ಈ ಆದೇಶವು 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುತ್ತದೆ.
2. ಮೊದಲನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ವಿಶ್ವವಿದ್ಯಾನಿಲಯದಿಂದ ಪಡೆದುಕೊಳ್ಳುವ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಪದವಿ ಹಾಗೂ(ಪ್ರಥಮ, ದ್ವಿತೀಯ ಮತ್ತು ತೃತೀಯ ವಿದ್ಯಾರ್ಥಿ/ವಿದ್ಯಾರ್ಥಿನಿಯರು). ಸ್ನಾತಕೋತ್ತರ ಪದವಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಪಡೆದ ಶುಲ್ಕದ ಮೊತ್ತ ಮತ್ತು **ಶೇ25%** ರಂತೆ ಕಡಿತಗೊಳಿಸಿದ ಮೊತ್ತದ ವಿವರಗಳ ಹಾಗೂ ವಿಶ್ವವಿದ್ಯಾನಿಲಯದ ಕ್ರೀಡಾ ನಿಧಿಗೆ ಶುಲ್ಕ ಜಮೆ ಮಾಡಿದ ವಿವರಗಳನ್ನು ಪ್ರತ್ಯೇಕವಾಗಿ, ಕುಲಸಚಿವರು, ಹಣಕಾಸು ಅಧಿಕಾರಿಗಳು ಮತ್ತು ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ ಇವರುಗಳಿಗೆ ಸಲ್ಲಿಸತಕ್ಕದ್ದು.
3. **ಶೇ25%** ರಷ್ಟು ಮರುಗಡೆ ಮಾಡಿಕೊಂಡ ಹಣವನ್ನು ಆಯಾ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನಲ್ಲಿ ಕ್ರೀಡೆಗೆ ಮತ್ತು ಕ್ರೀಡೆಗೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ (ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ ಇವರು **ಅನುಬಂಧ 01** ರಲ್ಲಿ ನೀಡಿರುವ ಮಾರ್ಗ ಸೂಚಿಯಂತೆ ಕಡ್ಡಾಯವಾಗಿ ಅನುಸರಿಸುವುದು.) ತಾವು ಸದ್ಬಳಕೆ ಮಾಡಿಕೊಂಡು ಖರ್ಚು ವೆಚ್ಚಗಳ ಲೆಕ್ಕಪತ್ರಗಳೊಂದಿಗೆ ಪೂರ್ಣ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಆಯಾ ವರ್ಷದಲ್ಲೇ ಅಂದರೆ ಮಾರ್ಚ್ 31ರೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ತದನಂತರದ ಆಯ-ವ್ಯಯ ವರ್ಷಗಳಲ್ಲಿ ಈ ಹಣವನ್ನು ಬಳಸಿಕೊಳ್ಳಲು ಅವಕಾಶವಿರುವುದಿಲ್ಲ.

ಕುಲಸಚಿವರು

ಗೆ,

ತುಮಕೂರು ವಿಶ್ವವಿದ್ಯಾನಿಲಯದ ಘಟಕ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ಬಿ.ಹೆಚ್.ರಸ್ತೆ, ತುಮಕೂರು–572 103. ಫೋ. 0816-2255597, ಫ್ಯಾಕ್ಸ್: 0816-2270719


ದಿನಾಂಕ: 12–09–2017

## ಮಾರ್ಗಸೂಚಿ

ತುಮಕೂರು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಪ್ರತೀ ವರ್ಷ ಸಂಗ್ರಹಿಸಲಾಗುವ ಕ್ರೀಡಾ ಅಭಿವೃದ್ಧಿ ಶುಲ್ಕದ ಶೇ 25% ರಷ್ಟು ಹಣವನ್ನು ಸಂಬಂಧ ಪಟ್ಟ ಕಾಲೇಜುಗಳಲ್ಲಿ ಉಳಿಸಿಕೊಂಡು ಈ ಕೆಳಕಂಡ ಮಾರ್ಗ ಸೂಚಿಯಂತೆ ಸೂಕ್ತ ಬಳಕೆ ಮಾಡಬಹುದು.

1. ಕ್ರೀಡಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಉಪಯೋಗಿಸಬಹುದು.
2. ಮೈದಾನಗಳ ತಯಾರಿ ಮತ್ತು ನಿರ್ವಹಣೆಗಾಗಿ ಉಪಯೋಗಿಸಬಹುದು.
3. ಕಾಲೇಜು ಕ್ರೀಡಾ ತಂಡಗಳ ತರಬೇತಿ ಶಿಬಿರದ ಆಯೋಜನೆ, ಅಭ್ಯಾಸ ಪಂದ್ಯ, ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ ಮತ್ತು ತರಬೇತುದಾರರಿಗೆ ಗೌರವಧನ ನೀಡುವುದು.
4. ಅಂತರ್ ಕಾಲೇಜು ಪಂದ್ಯಾವಳಿಗಳಲ್ಲಿ ಭಾಗವಹಿಸುವ ತಂಡಗಳ ಸಮವಸ್ತ್ರಗಳ ಖರೀದಿ, ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಕ್ರೀಡಾ ನಿಧಿಯ ಕೊರತೆ ಇರುವ ಕಾಲೇಜುಗಳು ವೆಚ್ಚ ಮಾಡಬಹುದು (200 ಸಂಖ್ಯೆಗಿಂತ ಕಡಿಮೆ ಇರುವ ಕಾಲೇಜುಗಳಿಗೆ ಮಾತ್ರ ಈ ನಿಯಮ ಅನ್ವಯಿಸುವುದು).
5. ಶಾಶ್ವತವಾಗಿ ಉಳಿಯುವ ಕ್ರೀಡಾ ಸಾಮಗ್ರಿಗಳ ಖರೀದಿ ಮತ್ತು ಸದರಿ ಉಪಕರಣಗಳ ನಿರ್ವಹಣೆ ಮಾಡಲು ಉಪಯೋಗಿಸಬಹುದು.
6. ಅಂತರ ಕಾಲೇಜು ಕ್ರೀಡಾ ಸ್ಪರ್ದೆಗಳ ಸಂಘಟನೆಯ ವೆಚ್ಚಕ್ಕಾಗಿ ಉಪಯೋಗಿಸಬಹುದು.
7. ಕಾಲೇಜು ಕ್ರೀಡಾ ಪಟುಗಳ ತರಬೇತಿ ಶಿಬಿರ ನಡೆಸುವ ಸಂದರ್ಭದಲ್ಲಿ ಹಾಗೂ ಅಂತರ ತರಗತಿ ಕ್ರೀಡಾಕೂಟ ನಡೆಸುವ ಸಂದರ್ಭದಲ್ಲಿ ಕ್ರೀಡಾಪಘಾತವಾದಲ್ಲಿ ಸದರಿ ಕ್ರೀಡಾಪಟುಗಳ ವೈದ್ಯಕೀಯ ವೆಚ್ಚ ಭರಿಸುವುದಕ್ಕಾಗಿ ಉಪಯೋಗಿಸಬಹುದು.
8. ಕ್ರೀಡಾ ಕಾರ್ಯಗಾರ/ವಿಚಾರ ಸಂಕಿರಣ/ಸಮ್ಮೇಳನ ಮತ್ತು ವಿಶೇಷ ಕ್ರೀಡಾ ತರಬೇತಿಗೆ/ ವಿಶೇಷ ಉಪನ್ಯಾಸಗಳಿಗೆ ಸಂಬಂಧಿಸಿದ ಚಟುವಟಿಕೆಗಳ ಸಂಘಟನೆಗಾಗಿ ಉಪಯೋಗಿಸಬಹುದು.
9. ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಸಂಘಟನೆ ಸಂಬಂಧ ಉಪಯೋಗಿಸಬಹುದು.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಸಿದಂತೆ, ಸದರಿ ಕ್ರೀಡಾಅಭಿವೃದ್ಧಿ ನಿಧಿಯ ನಿರ್ವಹಣೆಯು ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕರು ಕ್ರೀಡಾ ನಿಧಿಯನ್ನು ಬಳಸುವ ಬಗ್ಗೆ ಹೊರಡಿಸಿರುವ ಮಾರ್ಗ ಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು.

ಕುಲಸಚಿವರು

ಗೆ,

ತುಮಕೂರು ವಿಶ್ವವಿದ್ಯಾನಿಲಯದ ಘಟಕ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.